# ಆಹಾ ಸುದ್ದಿ!

★ ಸಸಿತೋಟ



ಲಂಡನ್ನಿನ ಬ್ರಿಕ್ ಲೇನ್‌ನಲ್ಲಿ ಕೆರೋನ್ ಹಾಗೂ ಮೈಕೇಲ್ ತಮ್ಮ 3ಡಿ ಬೊಂಬೆಗಳನ್ನು ಪ್ರದರ್ಶನಕ್ಕಿಟ್ಟಿದ್ದಾರೆ. ತಮಗೆ ಹೊಂದುವ ಗೆಳತಿಯರನ್ನು ಸಂಪಾದಿಸುವುದು ಇದರ ಉದ್ದೇಶವಂತೆ. ಯಾರಿಗೆ ಗೊತ್ತು, ಮುಂದೊಂದು ದಿನ ಪುರುಷರು ತಾವೇ ಸ್ವತಃ ಶೋಕೇಸ್‌ನಲ್ಲಿ ನಿಂತು ಹುಡುಗಿಯರ ಗಮನ ಸೆಳೆಯುವ ತಂತ್ರಗಾರಿಗೆ ಬಂದರೂ ಬರಬಹುದು. ಸೌಂದರ್ಯದ ಬಗ್ಗೆ ವೆಬ್‌ಸೈಟ್‌ನಲ್ಲಿ ಸುಳ್ಳುಸುಳ್ಳೇ ಬರೆದುಕೊಂಡು, ಇನ್ನಾರದೋ ಫೋಟೊ ಲಗತ್ತಿಸಿಕೊಂಡು ಯಾರೂ ನಂಬದಂತಹ ಸ್ಥಿತಿ ನಿರ್ಮಾಣವಾಗಿದ್ದಕ್ಕೆ ಈ ಹೊಸ ತಂತ್ರ ಇರಬಹುದು.

ವಿಶ್ವದ ಅತ್ಯಂತ ವೇಗದ ಓಟಗಾರ ಉಸೇನ್ ಬೋಲ್ಟ್‌ನಂತೆ ಓಡಬೇಕಾ? ಹಾಗಾದರೆ ಈ ಶೂಗಳನ್ನು ಧರಿಸಿ ಓಡಿ. ಗಂಟೆಗೆ 25 ಮೈಲು ವೇಗದಲ್ಲಿ ನೀವು ಕೂಡಾ ಓಡಲು ಸಾಧ್ಯ. ಆದರೆ ಇದನ್ನು ತಯಾರಿಸಿದ ಇಂಗ್ಲೆಂಡ್‌ನ ಕೀಹಿ ಸೈಮೌರ್‌ಗೆ ಮಾತ್ರ ಬೋಲ್ಟ್ ಮಾಡೆಲ್ ಅಲ್ಲ, ಅತ್ಯಂತ ವೇಗವಾಗಿ ಓಡುವ ಉಷ್ಟ್ರ ಪಕ್ಷಿಗಳು, ಕಾಂಗರೂ ಮಾಡೆಲ್ ಅಂತೆ. ಅಂದರೆ ಓಡುವವರು ಬೋಲ್ಟ್‌ಗೆ ಸ್ಪರ್ಧೆ ನೀಡುವ ಬದಲು ಕಾಂಗರೂಗೇ ಪೈಪೋಟಿ ನೀಡಬಹುದು.



ನ್ಯೂಯಾರ್ಕ್ ನಗರದಲ್ಲಿ 20 ಲಕ್ಷ ಇಲಿಗಳಿವೆಯಂತೆ. ಅಂದರೆ ಒಬ್ಬ ನಿವಾಸಿಗೆ ಒಂದು ಇಲಿಯಂತೆ. ಹೀಗೆ ಕರಾರುವಾಕ್ಕಾಗಿ ಲೆಕ್ಕ ಹಾಕಿದ ವ್ಯಕ್ತಿ ಕೊಲಂಬಿಯಾ ವಿಶ್ವವಿದ್ಯಾನಿಲಯದ ಸಂಶೋಧನ ವಿದ್ಯಾರ್ಥಿ ಜೋನಾಥನ್. ಇಲಿಗಳನ್ನು ಹಿಡಿಯುವುದು, ಲೆಕ್ಕ ಬರೆದಿಟ್ಟುಕೊಂಡು, ಅದರ ಮೇಲೆ ಗುರುತು ಹಾಕಿ ಬಿಡುವುದು.. ಈ ಯೋಜನೆ ಜೋನಾಥನ್ ತಲೆಯಲ್ಲಿ ಇತ್ತಾದರೂ ನಗರದ ಆರೋಗ್ಯಾಧಿಕಾರಿಗಳು ಅನುಮತಿ ನೀಡಲಿಲ್ಲವಂತೆ. ಅದಕ್ಕೇ ಇಲಿಗಳನ್ನು ಕಂಡು ಆನ್‌ಲೈನ್‌ನಲ್ಲಿ ನೀಡಿದ ದೂರುದಾರರ ಹೇಳಿಕೆ ಆಧರಿಸಿ ಈ ಲೆಕ್ಕಾಚಾರವಂತೆ. ಅದೇ ಇಲಿ ಇನ್ನೊಬ್ಬ ನಿವಾಸಿ ಎದುರು ಮತ್ತೆ ವಕ್ಕರಿಸಿಲ್ಲ ಎಂಬುದಕ್ಕೆ ಏನು ಗ್ಯಾರಂಟಿ? ಈ ಸಂಶೋಧನ ಪ್ರಬಂಧಕ್ಕೆ ಡಾಕ್ಟೊರೇಟ್ ಕೊಡುವವರಿಗೆ ಇಲಿಯೇ ಪ್ರಭಾವ ಬೀರಬಹುದೇನೋ, ಗುರುತು ಹಾಕಿಸಿಕೊಳ್ಳುವುದರಿಂದ ಬಚಾವ್ ಆಗಿದ್ದಕ್ಕೆ!

ಅಲಾಸ್ಕಾದಲ್ಲಿ ಕಳ್ಳರ ಹಾವಳಿ ಜಾಸ್ತಿಯಂತೆ. ಆದರೆ ಆ ಕಳ್ಳರಿಗೆ ಹಣ, ಒಡವೆ ಬೇಡ, ಮಹಿಳೆಯರ ಒಳ ಉಡುಪುಗಳನ್ನು ಕದಿಯುವ ಚಟವಂತೆ. ಮನೆಯೊಳಗೆ, ಬ್ಯಾಗಿನೊಳಗೆ, ಕಪಾಟಿನೊಳಗೆ ಬೀಗ ಹಾಕಿಟ್ಟರೂ ಬೀಗ ಮುರಿದು ಕದಿಯುತ್ತಾರಂತೆ. ಈ ಬಗ್ಗೆ ಎಚ್ಚರಿಕೆಯಿಂದಿರಿ ಎಂದು ಪೊಲೀಸರೂ ಪ್ರಚಾರ ಮಾಡುತ್ತಿದ್ದಾರಂತೆ. ಅಮೂಲ್ಯ ವಸ್ತು ಪಟ್ಟಿಗೆ ಹೊಸ ಸೇರ್ಪಡೆ!



ಚೀನಾದ ಟೋನಿ ಝುವಾನ್ ತನ್ನ ಗೆಳತಿಗೆ ಮದುವೆ ಪ್ರಸ್ತಾವ ಸಲ್ಲಿಸಲು ವಿನೂತನ ರೀತಿ ಆಯ್ಕೆ ಮಾಡಿಕೊಂಡ. ಒಟ್ಟು 99 ಐಫೋನ್ 6ಎಸ್ ಫೋನ್‌ಗಳನ್ನು ಖರೀದಿಸಿದ. ಅದನ್ನು ಹೃದಯದಾಕಾರದಲ್ಲಿ ಜೋಡಿಸಿ ಹುಡುಗಿಗೆ ಪ್ರಸ್ತಾವ ಸಲ್ಲಿಸಿದರೂ ಆಕೆ ನಿರಾಕರಿಸಿದಳಂತೆ. ಇದಕ್ಕಾಗಿ ತನ್ನ ಎರಡು ವರ್ಷಗಳ ಆದಾಯವಾದ ಒಟ್ಟು 50 ಸಾವಿರ ಪೌಂಡ್ ವ್ಯಯಿಸಿದ್ದೇ ಬಂತು. ಹೊರಗಡೆ ಹೃದಯ ರಚಿಸುವ ಬದಲು ಹುಡುಗಿಯ ಹೃದಯದೊಳಗೆ ಏನಿದೆ ಎಂದು ತಿಳಿದುಕೊಂಡಿದ್ದರೆ ಆ 50 ಸಾವಿರ ಪೌಂಡ್ ಹಣವಾದರೂ ಉಳಿಯುತ್ತಿತ್ತು.

ಕೈರೋದ ಮೆಹಮೂದ್ ಪ್ರಾಣಿಗಳ ಕ್ಷೌರಿಕ. ಕತ್ತೆ, ಕುದುರೆ, ನಾಯಿ, ಹಸುಗಳ ಕೂದಲನ್ನು ನೀಟಾಗಿ ಕತ್ತರಿಸುವುದಲ್ಲದೆ, ವಿವಿಧ ವಿನ್ಯಾಸಗಳನ್ನೂ ಮಾಡುತ್ತಾನಂತೆ. ಕೇಶ ವಿನ್ಯಾಸ ಮಾಡುವಾಗ ಅವುಗಳು ರಂಪ ಮಾಡದಂತೆ ನೋಡಿಕೊಳ್ಳುವ ಕಲೆಯೂ ಆತನಿಗೆ ಚೆನ್ನಾಗಿ ಗೊತ್ತು. ಪ್ರಾಣಿಗಳ ಕೇಶ ವಿನ್ಯಾಸ ಅತ್ಯಂತ ಪ್ರಾಚೀನ ಕಲೆ ಎನ್ನುತ್ತಾನಂತೆ ಮೆಹಮೂದ್. ಬಹುಶಃ ಈ ಕಲೆ ಪ್ರಾಣಿಗಳಿಂದಲೇ ಮನುಷ್ಯನಿಗೆ ದಾಟಿ ಬಂದಿರಬಹುದು.

